# ಶಿಕ್ಷಕರ ಸಾಮರ್ಥ್ಯಾಭಿವೃದ್ಧಿ : ಅರಿವು ಕನ್ನಡ ಶಾಲೆಯ ವಿನೂತನ ಪ್ರಕರಣ ಅಧ್ಯಯನ

*– ಎಂ. ಸಿ. ಮನೋಹರ*

## ಲೇಖನದ ಸಾರಾಂಶ

*ಸಾಂಪ್ರದಾಯಿಕ ಶಿಕ್ಷಣ ಪದ್ಧತಿಗಿಂತ ಸ್ವಲ್ಪ ಭಿನ್ನವಾಗಿ, ಆದರೆ ಶಿಕ್ಷಣ ನೀತಿಗಳ ಆಶಯದಂತೆಯೇ ಉತ್ತಮ ಪ್ರಜೆಗಳನ್ನು ನಿರ್ಮಾಣ ಮಾಡುವ ಸದುದ್ದೇಶದಿಂದ ಮೈಸೂರಿನ ಕಾಳಜಿಯುಳ್ಳ ಪೋಷಕರಿಂದಲೇ ಮಗುಸ್ನೇಹಿ ವಾತಾವರಣದಲ್ಲಿ ಪ್ರಾರಂಭಗೊಂಡ ಶಾಲೆ 'ಅರಿವು'. ಕನ್ನಡ ಮಾಧ್ಯಮದಲ್ಲಿಯೇ ನಡೆಸುತ್ತಿರುವ ಈ ಶಾಲೆಯ ಪ್ರಕ್ರಿಯೆಗಳನ್ನು ನಾವೀನ್ಯಪೂರ್ಣವಾಗಿ ವಿನ್ಯಾಸಗೊಳಿಸಿ ಪಠ್ಯಕ್ರಮ, ಸಹಪಠ್ಯ ಚಟುವಟಿಕೆಗಳಿಗೆ ಸಮಾನ ಮಹತ್ವ ನೀಡಲಾಗುತ್ತಿದೆ. ಪೋಷಕರ ನಿರೀಕ್ಷೆಗಳನ್ನು ತಲುಪುವ, ಮಕ್ಕಳನ್ನು ಸ್ಪರ್ಧಾತ್ಮಕ ಜಗತ್ತಿಗೆ ಅಣಿಗೊಳಿಸುವ, ಸವಾಲುಗಳನ್ನು ಎದುರಿಸಿಯೂ ಶಿಕ್ಷಕರಿಗೆ ಸಾಕಷ್ಟು ಸ್ವಾತಂತ್ರ್ಯವನ್ನು ನೀಡಿ ಅವರ ವೃತ್ತಿಪರ ಬೆಳವಣಿಗೆಗೆ ವಿಪುಲ ಅವಕಾಶಗಳನ್ನು ಶಾಲೆ ಒದಗಿಸುತ್ತಿದೆ. ಸ್ವಯಂ ಶಿಕ್ಷಕರ ಬೆಳವಣಿಗೆ ಮತ್ತು ಮಕ್ಕಳ ಸರ್ವತೋಮುಖ ಬೆಳವಣಿಗೆ ಎರಡಕ್ಕೂ ಶಾಲೆ ಹೇಗೆ ಸಾಕ್ಷಿಯಾಗಿದೆ ಎನ್ನುವ ಸ್ವ-ಅವಲೋಕನವನ್ನು ಶಾಲೆಯ ಸಂಸ್ಥಾಪಕರಲ್ಲಿ ಒಬ್ಬರಾದ ಲೇಖಕರು ಪ್ರಸ್ತುತಪಡಿಸಿದ್ದಾರೆ.*

"ಒಬ್ಬ ಮಾಮೂಲಿ ಶಿಕ್ಷಕ ಹೇಳುತ್ತಾನೆ. ಒಬ್ಬ ಒಳ್ಳೆಯ ಶಿಕ್ಷಕ ವಿವರಿಸುತ್ತಾನೆ. ಉತ್ತಮ ಶಿಕ್ಷಕ ಪ್ರಾತ್ಯಕ್ಷಿಸುತ್ತಾನೆ. ಶ್ರೇಷ್ಠ ಶಿಕ್ಷಕ ಸ್ಫೂರ್ತಿಯಾಗುತ್ತಾನೆ" – ವಿಲಿಯಂ ಆರ್ಥರ್ ವಾರ್ಡ್.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಪ್ರಕಾರ ಜ್ಞಾನವನ್ನು ನೇರವಾಗಿ ವಿದ್ಯಾರ್ಥಿಗಳಿಗೆ ನೀಡುವ ವಿಧಾನಕ್ಕಿಂತ, ಅದನ್ನು ಕಟ್ಟುವ ಪ್ರಕ್ರಿಯೆ ಮುಖ್ಯವಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಮಗು ತನ್ನ ಸುತ್ತಲಿನ ಪರಿಸರದಿಂದ ಮತ್ತು ಅದರ ಒಡನಾಟದ ಅನುಭವದಿಂದ ಜ್ಞಾನವನ್ನು ಪಡೆಯುವ ಪ್ರಕ್ರಿಯೆಗೆ ಹೆಚ್ಚು ಒತ್ತು ನೀಡಲಾಗುತ್ತದೆ. ಈ ಮೂಲಕ ಮಗು ಅಂತಿಮವಾಗಿ ವಿಷಯದ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಲು, ತರ್ಕಬದ್ಧವಾಗಿ ಆಲೋಚಿಸಲು ಮತ್ತು ಕಲಿಕೆಯಲ್ಲಿ ಸ್ವಾವಲಂಬಿಯಾಗುವ ದಿಕ್ಕಿನತ್ತ ಮುಂದುವರೆಯುತ್ತಾನೆ. ಹಾಗೆಯೇ ಶಿಕ್ಷಕ ಒಬ್ಬ ಸುಗಮಗಾರನಾಗಿ, ಪ್ರೇರಕನಾಗಿ ಮತ್ತು ಸ್ಫೂರ್ತಿಯ ಸೆಲೆಯಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ.

ನಾವು ಸೃಜನಶೀಲ, ಚಟುವಟಿಕೆಯಾಧಾರಿತ ಕನ್ನಡ ಶಾಲೆ (ಇದು ರಾಜ್ಯ ಸರ್ಕಾರದ ಅನುಮತಿ ಪಡೆದಿದೆ) ಪ್ರಾರಂಭಿಸಿದಾಗ ಎದುರಾದ ಸವಾಲು ಶಿಕ್ಷಕರದ್ದು. ಪ್ರಸಕ್ತ ಶೈಕ್ಷಣಿಕ ಪದ್ಧತಿಯಲ್ಲೇ ಕಲಿತಿರುವ ಬಹುತೇಕ ಶಿಕ್ಷಕರು ಸೃಜನಶೀಲತೆಯನ್ನು ಕಳೆದುಕೊಂಡಿರುತ್ತಾರೆ. ಶಿಕ್ಷಕರನ್ನು ರೂಪಿಸುವ ಸಂಸ್ಥೆಗಳಲ್ಲಿ ಜ್ಞಾನಕ್ಕಿಂತ ಬೋಧನಾ ವಿಧಾನಗಳ ಕಲಿಕೆಗೇ ಹೆಚ್ಚು ಸಮಯ ವ್ಯಯಮಾಡಲಾಗುತ್ತಿದೆ. ಅವರಿಗೆ ಶಿಕ್ಷಣವೆಂದರೆ ಮಕ್ಕಳಿಗೆ ಪಾಠಗಳನ್ನು ಉರು ಹೊಡೆಸುವುದು ಮತ್ತು ಪರೀಕ್ಷೆಗಳಲ್ಲಿ ಅಂಕ ಗಳಿಸುವಂತೆ ತಯಾರಿ ಮಾಡುವ ಪ್ರಕ್ರಿಯೆಯಾಗಿದೆ. ಹೀಗಾಗಿ ಶಾಲೆಯ ಆಡಳಿತ ಮಂಡಳಿಯಲ್ಲಿರುವ ನಮಗೆ ಶಿಕ್ಷಕರಲ್ಲಿ ಸೃಜನಶೀಲತೆಯನ್ನು ಬೆಳೆಸುವುದು, ಜ್ಞಾನವನ್ನು ಹೆಚ್ಚಿಸಿಕೊಳ್ಳುವುದು ಮತ್ತು ಅದು ನಿರಂತರವಾಗಿ ಮುಂದುವರೆಯುವಂತೆ ಮಾಡುವುದು ದೊಡ್ಡ ಸವಾಲಾಗಿದೆ.

2008ರಲ್ಲಿ ಮೈಸೂರಿನಲ್ಲಿ ಪ್ರಾರಂಭವಾದ 'ಅರಿವು' ಶಾಲೆಯಲ್ಲಿ 8ನೇ ತರಗತಿಯವರೆಗೆ ಶಿಕ್ಷಣದ ಮಾಧ್ಯಮ ಕನ್ನಡ. ಕನ್ನಡ ಮಾಧ್ಯಮದ ಜೊತೆಗೆ ಚಟುವಟಿಕೆಯಾಧಾರಿತ ಶಿಕ್ಷಣ ಕ್ರಮವನ್ನು ಅಳವಡಿಸಿಕೊಂಡಿದ್ದೇವೆ. ಕನ್ನಡ ಮಾಧ್ಯಮ ಶಾಲೆಗಳಿಗಿರುವ ಪ್ರತಿಕೂಲ ಪರಿಸ್ಥಿತಿಯಲ್ಲೂ, ಅರಿವು ಶಾಲೆಗೆ ಮಕ್ಕಳನ್ನು ದಾಖಲಿಸಲು ಒಂದು ವರ್ಷದ ಮೊದಲೇ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಇದಕ್ಕೆ ಮುಖ್ಯ ಕಾರಣ, ಶಾಲೆಯ ಬಗ್ಗೆ ಪೋಷಕರಲ್ಲಿ ಹೆಚ್ಚುತ್ತಿರುವ ವಿಶ್ವಾಸ ಮತ್ತು ನಂಬಿಕೆ. ಈ ಎಲ್ಲಾ ಬೆಳವಣಿಗೆ, ಯಶಸ್ಸಿಗೆ ಆಡಳಿತ ಮಂಡಳಿಯ ಜೊತೆ ಶಿಕ್ಷಕರ ಪಾತ್ರವೂ ಮಹತ್ತರದ್ದಾಗಿದೆ.

ಈ ಪ್ರಬಂಧದಲ್ಲಿ ನಮ್ಮ ಶಾಲೆಯ ಶಿಕ್ಷಕರ ಜ್ಞಾನ ಮತ್ತು ಕೌಶಲದ ವೃದ್ಧಿಗೆ ಹಲವು ಆಯಾಮಗಳಲ್ಲಿ ನಾವು ಅನುಸರಿಸುತ್ತಿರುವ ಮತ್ತು ಕೈಗೊಂಡಿರುವ ಕ್ರಮಗಳನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ.

## ಅ) ಕಲಿಕಾ ವಾತಾವರಣ ನಿರ್ಮಾಣಕ್ಕೆ ಮೂಲಭೂತ ಸೌಕರ್ಯ

ಅರಿವು ಶಾಲೆಯಲ್ಲಿ ಸರಳ, ಸುಂದರ ಮತ್ತು ಪರಿಸರ ಸ್ನೇಹಿ ಸೌಕರ್ಯಗಳನ್ನು ಶಿಕ್ಷಕರಿಗೆ ಮತ್ತು ಮಕ್ಕಳಿಗೆ ಒದಗಿಸಲಾಗಿದೆ. ಪರಿಸರ ಸಂರಕ್ಷಣೆ ಮತ್ತು ಮಳೆ ನೀರಿನ ಸಂಗ್ರಹಣೆಯ ಮಹತ್ವವನ್ನು ತಿಳಿಸಿ, ಉತ್ತೇಜಿಸಲು ಶಾಲೆಯಲ್ಲಿ 60,000 ಲೀಟರ್ ಸಾಮರ್ಥ್ಯದ ಮಳೆ ನೀರಿನ ಸಂಗ್ರಹಣಾ ವ್ಯವಸ್ಥೆ ಮಾಡಲಾಗಿದೆ.

ತರಗತಿ ಕೋಣೆಗಳ ಹೊರಗೂ, ನೈಸರ್ಗಿಕ ವಾತಾವರಣದಲ್ಲಿ ಅನೌಪಚಾರಿಕವಾಗಿ ಮಕ್ಕಳಿಗೆ ಬೋಧಿಸಲು ಮತ್ತು ಚರ್ಚಿಸಲು ವ್ಯವಸ್ಥೆ ಮಾಡಲಾಗಿದೆ.

ಶಾಲೆಯ ಆವರಣದಲ್ಲಿ ಸುಮಾರು 55 ಜಾತಿಗಳ 75 ಮರಗಳನ್ನು ನೆಟ್ಟು ಬೆಳೆಸಲಾಗಿದೆ. ಮುಖ್ಯವಾಗಿ ಜೀವವಿಜ್ಞಾನದಲ್ಲಿ ಆಸಕ್ತಿ ಮೂಡಿಸಲು ಚಿಟ್ಟೆ ವನ ಮತ್ತು ಒಣ ಸಸ್ಯಗಳ ಸಂಗ್ರಹವನ್ನು ಮಾಡಲಾಗಿದೆ. ಅವುಗಳ ವೈಜ್ಞಾನಿಕ, ಇಂಗ್ಲಿಷ್ ಮತ್ತು ಕನ್ನಡ ಹೆಸರುಗಳ ಫಲಕಗಳನ್ನು ಅಳವಡಿಸಲಾಗಿದ್ದು, ಇದರಿಂದ, ಶಿಕ್ಷಕರು ಮತ್ತು ಮಕ್ಕಳಲ್ಲಿ ಗಿಡ, ಮರಗಳ ಬಗ್ಗೆ ಆಸಕ್ತಿ ಮೂಡಿಸುವ ಅನುಕೂಲಕರ ವಾತಾವರಣ ಉಂಟಾಗಿದೆ.

## ಆ) ವಿಷಯಾಧಾರಿತ ಸಂಪನ್ಮೂಲ ಕೇಂದ್ರಗಳು ಮತ್ತು ಕೊಠಡಿಗಳ ನಿರ್ಮಾಣ

ವಿಷಯವಾರು ಕೊಠಡಿಗಳನ್ನು ನಿರ್ಮಿಸಿ, ಆ ಕೊಠಡಿಗಳಲ್ಲೇ ಸಂಬಂಧಿಸಿದ ಪಾಠೋಪಕರಣಗಳು ಇರುವಂತೆ ವ್ಯವಸ್ಥೆ ಮಾಡಲಾಗಿದೆ. 5ನೇ ತರಗತಿಯ ನಂತರದ ಹಂತಗಳಲ್ಲಿ ಮಕ್ಕಳು ತಮಗೆ ಮೀಸಲಾಗಿರುವ ವಿಷಯದ ಅವಧಿಯಲ್ಲಿ ಆ ಕೊಠಡಿಗಳಲ್ಲೇ ಶಿಕ್ಷಕರ ಜೊತೆ ಕಲಿಯುವ ವ್ಯವಸ್ಥೆ ಮಾಡಲಾಗಿದೆ. ಇಲ್ಲಿ ನಿಗದಿತ ಅವಧಿಯ ನಂತರ ಮಕ್ಕಳು ಕೊಠಡಿ ಬದಲಾಯಿಸುತ್ತಾರೆ. ಶಿಕ್ಷಕರು ತಮ್ಮ ನಿಗದಿತ ವಿಭಾಗಗಳಲ್ಲೇ ಇರುತ್ತಾರೆ. ಈ ವಿಷಯಾಧಾರಿತ ಕೊಠಡಿಗಳಲ್ಲಿ ಮೊದಲಿಗೆ ಪ್ರಾಯೋಗಿಕವಾಗಿ 1 ಗಂಟೆ 30 ನಿಮಿಷದ ಅವಧಿಯನ್ನು ನಿಗದಿಪಡಿಸಲಾಗಿತ್ತು. ಮಕ್ಕಳ ಜೊತೆ ಪಠ್ಯದ ವಿಷಯವೊಂದನ್ನು ಆಳವಾಗಿ ವಿವರಿಸಲು, ಚಟುವಟಿಕೆಗಳನ್ನು ನಡೆಸಲು, ಚರ್ಚೆ ಮಾಡಲು, ಪ್ರಶ್ನೆಗಳಿಗೆ ಅವಕಾಶ ನೀಡಲು, ಈ ಅವಧಿಯನ್ನು ನಿಗದಿಪಡಿಸಲಾಗಿತ್ತು. 5 ತಿಂಗಳ ನಂತರ ಶಿಕ್ಷಕರ ಹಿಮ್ಮಾಹಿತಿಯನ್ನು ಪಡೆಯಲಾಯಿತು. ಮುಂದಿನ ವರ್ಷ 1 ಗಂಟೆಗೆ ತರಗತಿಯ ಅವಧಿಯನ್ನು ಸೀಮಿತಗೊಳಿಸಲು ಯೋಚಿಸುತ್ತಿದ್ದೇವೆ.

## 'ಅನ್ವೇಷಣೆ' ವಿಜ್ಞಾನ ಸಂಪನ್ಮೂಲ ಕೇಂದ್ರ

ವಾರಾಂತ್ಯದಲ್ಲಿ ನಡೆಯುವ "ಅನ್ವೇಷಣೆ" ವಿಜ್ಞಾನ ಚಟುವಟಿಕೆಗಳ ತರಗತಿಗಳಿಂದ, ಮಕ್ಕಳ ಜೊತೆ ಶಿಕ್ಷಕರಲ್ಲೂ ವೈಜ್ಞಾನಿಕ ಚಿಂತನೆ, ಮನೋಭಾವಗಳನ್ನು ಬೆಳೆಸುವ ಪ್ರಯತ್ನ ನಡೆಸಲಾಗುತ್ತಿದೆ.

ಇದಲ್ಲದೆ ಅರಿವು 'ಪರಿಸರ' ಸಂಪನ್ಮೂಲ ಕೇಂದ್ರದ ವತಿಯಿಂದ ತಿಂಗಳಿಗೊಮ್ಮೆ ನಡೆಯುವ ಪರಿಸರ–ಪ್ರಾಣಿ–ಪಕ್ಷಿ ಸಂಬಂಧಿ ಉಪನ್ಯಾಸಗಳಿಂದ ಮಕ್ಕಳಲ್ಲಿ ಸುತ್ತಲಿನ ಪರಿಸರದ ಬಗ್ಗೆ ಆಸಕ್ತಿ ಮೂಡಿ, ಸ್ವತಃ ಅಧ್ಯಯನ ಕೈಗೊಳ್ಳುವ ಮನೋಭಾವ ಹೆಚ್ಚಾಗುತ್ತಿದೆ.

## ಇ) ಸರಳ ಮತ್ತು ಸ್ಪಷ್ಟ ದಾಖಲೀಕರಣ ಪ್ರಕ್ರಿಯೆ

ಮಕ್ಕಳ ಕಲಿಕೆ ಬಗ್ಗೆ ಸಹಶಿಕ್ಷಕರಿಗೆ ಮತ್ತು ಪೋಷಕರಿಗೆ ಹಿಮ್ಮಾಹಿತಿ ನೀಡುವ ಉದ್ದೇಶದಿಂದ ಗಣಕ ಯಂತ್ರದಲ್ಲಿ, ಕಲಿಕೆಯ ವಿವಿಧ ಆಯಾಮಗಳನ್ನು ದಾಖಲು ಮಾಡುವ ವ್ಯವಸ್ಥೆಯನ್ನು ಶಿಕ್ಷಕರ ಜೊತೆ ಚರ್ಚಿಸಿ, ರೂಪಿಸಲಾಗಿದೆ. ಕೇವಲ ತಿಂಗಳಿಗೆ 1 ರಿಂದ 2 ಗಂಟೆಗಳಲ್ಲೇ ತಮಗೆ ವಹಿಸಿದ ಮಕ್ಕಳ ಬಗ್ಗೆ ತರಗತಿಯ ಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ತಮ್ಮ ಹಿಮ್ಮಾಹಿತಿ, ಅಭಿಪ್ರಾಯಗಳನ್ನು ದಾಖಲಿಸಬಹುದಾಗಿದೆ. ಈ ದಾಖಲೆಯನ್ನು ಸುಲಭವಾಗಿ ಶಿಕ್ಷಕರೇ ಅವಶ್ಯಕತೆ ಇದ್ದಾಗ ನೋಡುವ ವ್ಯವಸ್ಥೆಯಿದೆ. ಈ ಮೂಲಕ ಅಖಚಿತ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಬದಲು, ಸ್ಪಷ್ಟವಾಗಿ ಮಾಹಿತಿಯ ಆಧಾರದಲ್ಲಿ ಮಕ್ಕಳ ಕಲಿಕೆಯ ಬಗ್ಗೆ ಪೋಷಕರು ಮತ್ತು ಸಹಶಿಕ್ಷಕರ ಜೊತೆ ಸುಲಭವಾಗಿ ಹಂಚಿಕೊಳ್ಳಬಹುದಾಗಿದೆ.

## ಈ) ರಾಷ್ಟ್ರೀಯ ಪಠ್ಯಕ್ರಮ ನೀತಿಯ ಹಿನ್ನೆಲೆಯಲ್ಲಿ ಮಾರ್ಗದರ್ಶನ

ಈ ದಿನಗಳಲ್ಲಿ ಶಿಕ್ಷಕರಿಗೆ ಪಠ್ಯ ಮತ್ತು ಬೋಧನಾ ಕ್ರಮದ ಬಗ್ಗೆ ಅಧಿಕಾರದ ಸ್ಥಾನದಲ್ಲಿರುವ ಯಾರು ಬೇಕಾದರೂ, ಎಷ್ಟು ಬೇಕಾದರೂ ಉಪದೇಶ ನೀಡುವ ಚಾಳಿ ಹೆಚ್ಚಾಗುತ್ತಿದೆ. ಇದಕ್ಕೆ ಬದಲಾಗಿ ರಾಷ್ಟ್ರೀಯ ಪಠ್ಯಕ್ರಮ ನೀತಿ 2005ರ ಆಧಾರದಲ್ಲಿ ಮಾತ್ರ ಶಿಕ್ಷಕರ ಜೊತೆ ಚರ್ಚಿಸುವ, ಮಾರ್ಗದರ್ಶನ ಮಾಡುವ ನಿಯಮವನ್ನು ಪಾಲಿಸುತ್ತಿದ್ದೇವೆ. ಇದರಿಂದ ಶಿಕ್ಷಕರು ಗೊಂದಲಕ್ಕೊಳಗಾಗದೆ, ತಮ್ಮ ಅಭಿಪ್ರಾಯವನ್ನು, ಯೋಚನೆಯನ್ನು ರೂಪಿಸಿಕೊಳ್ಳುವಂತಾಗಿದೆ. ಜೊತೆಗೆ ರಾಷ್ಟ್ರೀಯ ಪಠ್ಯಕ್ರಮ ನೀತಿ 2005ರ ಆಧಾರ ಮತ್ತು ಚೌಕಟ್ಟಿನಲ್ಲಿ ತಮ್ಮದೇ ಆದ ಪಠ್ಯಕ್ರಮವನ್ನು ಪ್ರಾದೇಶಿಕ ಅವಶ್ಯಕತೆಗನುಗುಣವಾಗಿ ರೂಪಿಸಿಕೊಳ್ಳಲು ಮಾರ್ಗದರ್ಶನವನ್ನು ವಿವಿಧ ವಿಷಯ ತಜ್ಞರಿಂದ ಒದಗಿಸಲಾಗುತ್ತಿದೆ.

## ಉ) ಶಿಕ್ಷಕರಿಗೆ ನೀಡಿರುವ ಸ್ವಾತಂತ್ರ್ಯ ಮತ್ತು ಹೊಣೆಗಾರಿಕೆ

'ಅರಿವು' ಪ್ರತಿಯೊಬ್ಬ ವ್ಯಕ್ತಿಯೂ, ಹಾಗೆಯೇ ಪ್ರತಿಯೊಬ್ಬ ಶಿಕ್ಷಕರೂ ವಿಶಿಷ್ಟ ಎಂಬ ನಿಲುವನ್ನು ತಳೆದಿದೆ. ಹಾಗಾಗಿ ಪ್ರತಿಯೊಬ್ಬ ಶಿಕ್ಷಕಿಯೂ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಆಧಾರದಲ್ಲಿ ತನ್ನಲ್ಲಿರುವ ಪ್ರತಿಭೆಯನ್ನು ಉಪಯೋಗಿಸಿಕೊಂಡು ವಿದ್ಯಾರ್ಥಿಗಳಿಗೆ ವಿಷಯ ಮುಟ್ಟಿಸಲು ಸ್ವತಂತ್ರರಾಗಿದ್ದಾರೆ. ವಿಧಾನಗಳು ಬದಲಾದರೂ ಮಕ್ಕಳು ವಿಷಯದ ಕಲಿಕೆಯನ್ನು ಇಷ್ಟಪಡುವಂತೆ ಪಾಠೋಪಕರಣಗಳನ್ನು ತಯಾರು ಮಾಡಿಕೊಳ್ಳಲು, ಅಗತ್ಯವಿರುವ ಪುಸ್ತಕಗಳನ್ನು ಖರೀದಿಸಲು (ಒಂದು ಬಾರಿಗೆ ರೂ. 1,000 ಮೀರದಂತೆ) ಅವಕಾಶ ಮಾಡಿಕೊಡಲಾಗಿದೆ. ಕೊಠಡಿಗಳಲ್ಲಿ ಮಾತ್ರವಲ್ಲದೆ, ಅಗತ್ಯವೆನಿಸಿದರೆ ಶಾಲೆಯ ಹೊರಗಡೆಯೂ ವಿದ್ಯಾರ್ಥಿಗಳನ್ನು ಕರೆದೊಯ್ದು ಬೋಧಿಸುವ ಅವಕಾಶ ನೀಡಲಾಗಿದೆ. ವಿಷಯ ಸಂಪನ್ಮೂಲ ವ್ಯಕ್ತಿಗಳಾಗಿ ಇತರೆ ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು ಮತ್ತು ಪೋಷಕರನ್ನೂ ಸಹ ಆಹ್ವಾನಿಸುವ ಸ್ವಾತಂತ್ರ್ಯವಿದೆ. ಈ ಮೂಲಕ ಕಲಿಕಾ ವಾತಾವರಣವನ್ನು ನಿರ್ಮಿಸಲು ಸಹಾಯ ಮಾಡಲಾಗುತ್ತದೆ. ಇವೆಲ್ಲದರ ಮೂಲಕ ಶಿಕ್ಷಕ ಕೇವಲ ಒಬ್ಬ ಒಣ ಬೋಧಕನಾಗದೆ, ವಿದ್ಯಾರ್ಥಿಗಳಿಗೆ ಮಾರ್ಗದರ್ಶಕನಾಗಿ, ವಿಷಯದ ಬಗ್ಗೆ ಸ್ಫೂರ್ತಿ ಮೂಡಿಸುವ ಮಹತ್ವದ ಹೊಣೆಗಾರಿಕೆಯನ್ನು ವಹಿಸಿಕೊಳ್ಳಲು ಪ್ರೋತ್ಸಾಹಿಸಲಾಗಿದೆ.

## ಊ) ಇಂಗ್ಲಿಷ್ ಕಲಿಕೆಗೆ ಉತ್ತೇಜನ

ಇಂಗ್ಲಿಷ್ ಭಾಷೆ ಜಾಗತಿಕ ಜ್ಞಾನ ಸಂಪಾದನೆಗೆ ಇರಬೇಕಾದ ಅನಿವಾರ್ಯ ಉಪಕರಣ. ಹಾಗಾಗಿ 'ಅರಿವು' ಕನ್ನಡ ಮಾಧ್ಯಮ ಶಾಲೆಯಾದರೂ, ಜ್ಞಾನಾರ್ಜನೆಗೆ ಅಗತ್ಯವಾದ ಇಂಗ್ಲಿಷ್ ಭಾಷಾ ಕಲಿಕೆಗೆ ಉತ್ತೇಜನ ನೀಡಲಾಗುತ್ತದೆ. ವ್ಯಾವಹಾರಿಕ ಇಂಗ್ಲಿಷ್ ಮಾತನಾಡಲು, ಓದಲು, ಬರೆಯಲು ಅನುಕೂಲವಾಗುವಂತೆ ಅಗತ್ಯ ಸಂಪನ್ಮೂಲಗಳನ್ನು ಶಾಲೆಯಲ್ಲಿ ಒದಗಿಸಲಾಗಿದೆ. ಕನ್ನಡ ಬಾರದ, ಇಂಗ್ಲಿಷ್ ಚೆನ್ನಾಗಿ

ಮಾತನಾಡುವ ಇಬ್ಬರು ಯೂರೋಪಿಯನ್ ಸ್ವಯಂಸೇವಕರು, ಶಾಲೆಯಲ್ಲಿ ಕಾರ್ಯನಿರ್ವಹಿಸುವಂತೆ ವ್ಯವಸ್ಥೆ ಮಾಡಲಾಗಿದೆ. ಈ ಮೂಲಕ ಅವರುಗಳ ಜೊತೆಗಿನ ದೈನಂದಿನ ಒಡನಾಟದಲ್ಲಿ ಅನಿವಾರ್ಯವಾಗಿ ಮತ್ತು ಸುಲಭವಾಗಿ ಇಂಗ್ಲಿಷ್ ಕಲಿಯುವಂತೆ ಅವಕಾಶ ಮಾಡಿಕೊಡಲಾಗಿದೆ. ಇದರಿಂದ ಶಿಕ್ಷಕರಿಗೆ ಇಂಗ್ಲಿಷ್ ಬಗೆಗಿನ ಅನಗತ್ಯ ಭಯ, ಕೀಳರಿಮೆ ಮತ್ತು ಮಡಿವಂತಿಕೆಯನ್ನು ದೂರ ಮಾಡಲು ಅನುಕೂಲವಾಗಿದೆ.

### ಋ) ನಾಯಕತ್ವ ಗುಣಗಳನ್ನು ಬೆಳೆಸಲು ಕೈಗೊಂಡಿರುವ ಕ್ರಮಗಳು

ಶೈಕ್ಷಣಿಕ ವರ್ಷದ ವಾರ್ಷಿಕ ಕಾರ್ಯಯೋಜನೆಯಲ್ಲಿ ಪ್ರತಿಯೊಬ್ಬ ಶಿಕ್ಷಕರಿಗೂ ಭೇಟಿ, ಪ್ರವಾಸ ಮತ್ತು ಕಾರ್ಯಾಗಾರಗಳನ್ನು ಆಯೋಜಿಸುವ ಜವಾಬ್ದಾರಿ ನೀಡಲಾಗಿದೆ. ಈ ಮೂಲಕ ಇತರೆ ಶಿಕ್ಷಕರು, ಪೋಷಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಅವರಲ್ಲಿ ಬೆಳೆಸಲಾಗಿದೆ. ಪ್ರವಾಸ ಮತ್ತು ಭೇಟಿಯ ಸಂದರ್ಭದಲ್ಲಿ ವೆಚ್ಚವನ್ನು ಯೋಜಿಸಿ, ನಿರ್ವಹಣೆ ಮಾಡುವ ಸ್ವಾತಂತ್ರ್ಯವನ್ನು ನೀಡಲಾಗಿದೆ. ಅಗತ್ಯವಿದ್ದಾಗ ಮಾರ್ಗದರ್ಶನ, ಹಿಮ್ಮಾಹಿತಿಯನ್ನೂ ನೀಡಲಾಗುತ್ತಿದೆ.

### ಎ) ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಕ್ರೀಡಾ ಚಟುವಟಿಕೆ

ಶಿಕ್ಷಕರು ಹಾಡುಗಳನ್ನು ಶೃತಿ ಮತ್ತು ತಾಳಬದ್ಧವಾಗಿ ಹಾಡುವುದನ್ನು ಕಲಿಯಲು, ಶಾಲೆಯಲ್ಲೇ ಅವಕಾಶ ಕಲ್ಪಿಸಲಾಗಿದೆ. ಹೀಗಾಗಿ 'ಅರಿವು' ಶಾಲೆಯಲ್ಲಿ ಸುಮಾರು ಒಂದು ಗಂಟೆ ಜನಪದ ಗೀತೆ, ಭಾವ ಗೀತೆ, ದೇವರ ನಾಮ, ವಚನಗಳನ್ನು ಸುಶ್ರಾವ್ಯವಾಗಿ ಹಾಡಿ, ಕಾರ್ಯಕ್ರಮ ನೀಡುವ ಸಾಮರ್ಥ್ಯವಿರುವ ಶಿಕ್ಷಕ–ಪೋಷಕರ ತಂಡವೇ ಇದೆ. ಈ ತಂಡ ಶಾಲಾ ಕಾರ್ಯಕ್ರಮಗಳಲ್ಲಿ ಹಾಗೂ ಮೈಸೂರಿನ ಅನೇಕ ಕಡೆಗಳಲ್ಲಿ ಈಗಾಗಲೇ ಕಾರ್ಯಕ್ರಮಗಳನ್ನು ನೀಡಲು ಪ್ರಾರಂಭಿಸಿದೆ.

'ಅರಿವು' ಶಿಕ್ಷಕರು ನಾಟಕಗಳಲ್ಲೂ ಅಭಿನಯಿಸುತ್ತಾರೆ. ಶಿಕ್ಷಕರ ಮತ್ತು ಪೋಷಕರನ್ನೊಳಗೊಂಡ, ಪೂರ್ಣ ಪ್ರಮಾಣದ ನಾಟಕ ತಂಡ 'ಅರಿವು ರಂಗ'ದ ವತಿಯಿಂದ ಕನಿಷ್ಠ ವರ್ಷಕ್ಕೊಂದು ನಾಟಕದಲ್ಲಿ ಬಹುತೇಕ ಶಿಕ್ಷಕರು ಅಭಿನಯಿಸುತ್ತಾರೆ. ಈ ತಂಡ ಮೈಸೂರು ಮತ್ತು ರಾಜ್ಯದ ವಿವಿಧ ಸ್ಥಳಗಳಲ್ಲಿ ಪ್ರದರ್ಶನ ನೀಡಿ, ಮೆಚ್ಚುಗೆ ಗಳಿಸಿದೆ. ಅರಿವು ಶಿಕ್ಷಕರ ನೃತ್ಯ ತಂಡವೂ ಸಹ ಇದೇ ರೀತಿ ಪ್ರದರ್ಶನ ನೀಡಿದೆ.

ಬಿಡುವಾದಾಗ ಮತ್ತು ಪ್ರತಿದಿನ ಸಂಜೆ, 'ಅರಿವು' ಶಾಲೆಯಲ್ಲಿ ಶಿಕ್ಷಕರು, ಪೋಷಕರು ಮತ್ತು ಮಕ್ಕಳು ಥ್ರೋಬಾಲ್ ಮತ್ತು ಕೊಕೊ ಆಟಗಳನ್ನು ಆಡುತ್ತಾರೆ. ಇದರಿಂದ ಅವರಲ್ಲಿ ದೈಹಿಕ ಸಾಮರ್ಥ್ಯ, ಆರೋಗ್ಯ ಮತ್ತು ಸಂತೋಷ ಹೆಚ್ಚಾಗಿದೆ. ಶಾಲೆಯ ಸುಮಾರು ಶೇಕಡಾ 50ರಷ್ಟು ಶಿಕ್ಷಕರಿಗೆ ಈಜು ತರಬೇತಿ ನೀಡಲಾಗಿದೆ. ಇದರಿಂದ ಈಜು ಕಲಿಯಲು ಮಕ್ಕಳಿಗೆ ಸ್ಫೂರ್ತಿದಾಯಕವಾಗಿದೆ.

## ಏ) ಬಾಹ್ಯ ಸಂಪನ್ಮೂಲ ವ್ಯಕ್ತಿಗಳ ಭಾಗವಹಿಸುವಿಕೆ

'ಅರಿವು' ಶಾಲೆಯಲ್ಲಿ ನಿಯಮಿತವಾಗಿ, ಅಗತ್ಯ ವಿಷಯಗಳನ್ನು ಕಲಿಸಲು ಪೋಷಕರು ಮತ್ತು ಇತರೆ ವಿಷಯ ತಜ್ಞರು ಸಂಪನ್ಮೂಲ ವ್ಯಕ್ತಿಗಳಾಗಿ ಬರುತ್ತಾರೆ. ಇವರ ಸಂಪರ್ಕದಿಂದ, ಜ್ಞಾನ ಮತ್ತು ಕೌಶಲಗಳು, ಶಿಕ್ಷಕರಿಗೂ ವರ್ಗಾವಣೆಯಾಗುತ್ತವೆ. ಕಲಿಯಲು-ಕಲಿಸಲು ಸ್ಫೂರ್ತಿ, ಹೊಸ ಯೋಚನೆಗಳು ಶಿಕ್ಷಕರಲ್ಲಿ ಮೂಡುತ್ತಿವೆ. ಇದರಿಂದ ರಕ್ಷಿತ ವಲಯದಲ್ಲೇ (Safe zone) ಇದ್ದು, ಏನನ್ನೂ ಹೊಸದಾಗಿ ಕಲಿಯದ ಬಾವಿಯಲ್ಲಿನ ಕೂಪಮಂಡೂಕಗಳಂತಾಗದೆ, ಹೊಸ ವಿಚಾರಗಳನ್ನು ಅರಿಯುವ ಮುಕ್ತತೆಯನ್ನು ಶಿಕ್ಷಕರು ಹೊಂದಿದ್ದಾರೆ.

## ಐ) ಜ್ಞಾನವೃದ್ಧಿಗೆ ಗ್ರಂಥಾಲಯ ಮತ್ತು ಅಂತರ್ಜಾಲದ ಸದುಪಯೋಗ

ಶಿಕ್ಷಕರ ಜ್ಞಾನವೃದ್ಧಿಗೆ ಅನುಕೂಲವಾಗುವಂತೆ ಸುಸಜ್ಜಿತ ಗ್ರಂಥಾಲಯವೊಂದನ್ನು ಸಜ್ಜುಗೊಳಿಸಲಾಗಿದೆ. ಈ ಗ್ರಂಥಾಲಯವನ್ನು ವೈಜ್ಞಾನಿಕವಾಗಿ 'ಮೈಸೂರು ಗ್ರಂಥಪಾಲಕರ ಸಂಘ'ದ ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಗ್ರಂಥಾಲಯದಲ್ಲಿರುವ ಎಲ್ಲಾ ಪುಸ್ತಕಗಳ ಸೂಚಿಯನ್ನು ಗಣಕಯಂತ್ರದಲ್ಲಿ ಅಳವಡಿಸಲಾಗಿರುವುದರಿಂದ ಪುಸ್ತಕದ ಹೆಸರು, ಲೇಖಕ ಮತ್ತು ವಿಷಯದ ಆಧಾರದಲ್ಲಿ ಸುಲಭವಾಗಿ ಹುಡುಕಬಹುದಾಗಿದೆ. ಇದರಿಂದ ಶಿಕ್ಷಕರಿಗೆ ಬೇಕಾದ ಪುಸ್ತಕ, ಅಗತ್ಯ ಸಂದರ್ಭದಲ್ಲಿ ಸುಲಭವಾಗಿ ಸಿಗುವ ಹಾಗಿದೆ. ವಾರಕ್ಕೊಮ್ಮೆ ಎಲ್ಲಾ ಮಕ್ಕಳಿಗೂ ಗ್ರಂಥಾಲಯದ ಒಂದು ತರಗತಿ ಲಭ್ಯವಿರುವುದರಿಂದ, ಈ ಸಂದರ್ಭದಲ್ಲಿ ಶಿಕ್ಷಕರಿಗೂ ತಾವು ಓದಿದ, ಕೇಳಿದ ಪುಸ್ತಕಗಳ ಬಗ್ಗೆ ಮಕ್ಕಳ ಜೊತೆ ಚರ್ಚಿಸಲು ಅನುಕೂಲವಾದ ವಾತಾವರಣವಿದೆ.

ಇದರ ಜೊತೆಗೆ ಒಳ್ಳೆಯ ವೇಗದ ಅಂತರ್ಜಾಲ ಸಂಪರ್ಕ ಮತ್ತು ಗಣಕ ಯಂತ್ರಗಳನ್ನು ಶಾಲೆ ಹೊಂದಿದ್ದು, ಹೊಸ ವಿಚಾರ, ಸಾಕ್ಷ್ಯಚಿತ್ರ, ವೈಜ್ಞಾನಿಕ ಚಲನಚಿತ್ರಗಳು, ಸಂಗೀತ, ಸಾಹಿತಿಗಳು – ವಿಜ್ಞಾನಿಗಳ ಸಂದರ್ಶನಗಳನ್ನು ವೀಕ್ಷಿಸಲು, ಆ ಮೂಲಕ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಅವಕಾಶವಿದೆ.

## ಒ) 'ಅಂಗಳ' ಮಾಸಪತ್ರಿಕೆಯಲ್ಲಿ ಶಿಕ್ಷಕರ ಪಾತ್ರ

ಶಿಕ್ಷಕರು ಮತ್ತು ಮಕ್ಕಳಿಗೆ, ಮಾಹಿತಿ-ಜ್ಞಾನ-ಸೃಜನಶೀಲತೆಗೆ ವೇದಿಕೆಯೊದಗಿಸಲು 'ಅಂಗಳ' ಮಾಸಪತ್ರಿಕೆಯನ್ನು ಕಳೆದ ಒಂಭತ್ತು ತಿಂಗಳುಗಳಿಂದ ನಿಯಮಿತವಾಗಿ, ಪ್ರತಿ ತಿಂಗಳ ಎರಡನೇ ಶನಿವಾರದಂದು ಹೊರತರಲಾಗುತ್ತಿದೆ. ಮೂರು ಕನ್ನಡ ಮತ್ತು ಒಂದು ಇಂಗ್ಲಿಷ್-ಹಿಂದಿ ಭಾಷೆಯನ್ನೊಳಗೊಂಡ, ಪತ್ರಿಕೆಯ ತಿಂಗಳ ಸಂಪಾದಕರಾಗಿ ಶಿಕ್ಷಕರೊಬ್ಬರು ಜವಾಬ್ದಾರಿ ವಹಿಸಿಕೊಂಡಿರುತ್ತಾರೆ. ವರದಿ, ಕಥೆ, ಕವಿತೆ, ಸಂಪಾದಕೀಯ ಲೇಖನಗಳನ್ನು ಬರೆಯುವುದರ ಜೊತೆಗೆ ಇತರ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಂದಲೂ ಲೇಖನಗಳನ್ನು ಬರೆಸುವ, ಪೂರಕವಾದ ಅಗತ್ಯ ಚಿತ್ರಗಳನ್ನು

ಸಂಗ್ರಹಿಸಿ ಮುದ್ರಣಕ್ಕೆ ಕಳಿಸುವ ಜವಾಬ್ದಾರಿ, ಆಯಾ ಸಂಚಿಕೆಯ ಸಂಪಾದಕರದ್ದಾಗಿರುತ್ತದೆ. ಈ ಇಡೀ ಪ್ರಕ್ರಿಯೆಯಿಂದ, ಶಿಕ್ಷಕರಲ್ಲಿ ಬರೆಯುವ, ಬರೆಸುವ ಕೌಶಲ ಹೆಚ್ಚಾಗಿದೆ.

## ಔ) ಪುಸ್ತಕ ಚರ್ಚೆ ಕಾರ್ಯಕ್ರಮ

ವಾರಕ್ಕೊಮ್ಮೆ ನಡೆಯುವ ಪುಸ್ತಕ ಚರ್ಚೆ ಕಾರ್ಯಕ್ರಮದಲ್ಲಿ, ಒಬ್ಬ ಶಿಕ್ಷಕರು ತಾವು ಓದಿದ ಪುಸ್ತಕವೊಂದರ ಬಗ್ಗೆ ಇತರೆ ಶಿಕ್ಷಕರ ಜೊತೆ 15 ನಿಮಿಷ ಹಂಚಿಕೊಳ್ಳುತ್ತಾರೆ. ಮುಖ್ಯವಾಗಿ ತಮಗೆ ಆ ಪುಸ್ತಕದಲ್ಲಿ ಇಷ್ಟವಾದ, ಯೋಚಿಸುವಂತೆ ಮಾಡಿದ, ಖುಷಿಕೊಟ್ಟ ವಿಚಾರಗಳ ಬಗ್ಗೆ ತಿಳಿಸುತ್ತಾರೆ. ಪ್ರಶ್ನೆಗಳಿಗೂ ಉತ್ತರಿಸುವ ಪ್ರಯತ್ನ ಮಾಡುತ್ತಾರೆ. ಒಟ್ಟಾರೆಯಾಗಿ ಇದು, ಪುಸ್ತಕಗಳ ಬಗ್ಗೆ ಶಿಕ್ಷಕರಲ್ಲಿ ಕುತೂಹಲ, ಅಭಿರುಚಿ ಮೂಡಿಸುವ ಉದ್ದೇಶ ಹೊಂದಿರುವ ಚಟುವಟಿಕೆಯಾಗಿದೆ.

ಶಿಕ್ಷಕರ ಜ್ಞಾನ ಮತ್ತು ಕೌಶಲದ ವೃದ್ಧಿಗೆ ಪೂರಕವಾಗುವಂತಹ ಕಲಿಕಾ ವಾತಾವರಣವನ್ನು ನಿರ್ಮಾಣ ಮಾಡಲು, ಮೇಲೆ ತಿಳಿಸಿರುವ ಪ್ರಯತ್ನಗಳನ್ನು ಕಳೆದ 10 ವರ್ಷಗಳಲ್ಲಿ ಹಂತ, ಹಂತವಾಗಿ ಮಾಡಲಾಗಿದೆ.

ಮಕ್ಕಳ ಕಲಿಕೆಗೆ ಸಂಬಂಧಿಸಿದಂತೆ ಶಿಕ್ಷಕರೊಂದಿಗೆ ಶಾಲೆಯಲ್ಲಿ ನಿರಂತರ ಚರ್ಚೆ ನಡೆಸುತ್ತಿದ್ದು ಆಗಿಂದಾಗ್ಗೆ ಆರೋಗ್ಯಪೂರ್ಣ ಹಿಮ್ಮಾಹಿತಿಯನ್ನೂ ಹಂಚಿಕೊಳ್ಳಲಾಗುತ್ತಿದೆ.

## ಉಪಸಂಹಾರ

ಒಟ್ಟಾರೆಯಾಗಿ ಶಿಕ್ಷಕರ ಸಾಮರ್ಥ್ಯ, ವ್ಯಕ್ತಿತ್ವ ನಿರ್ಮಾಣಕ್ಕೆ ನಾವು ಮಾಡಿರುವ ಪ್ರಯತ್ನಗಳು ಒಳ್ಳೆಯ ಪರಿಣಾಮವನ್ನೇ ಬೀರಿವೆ. ಅರಿವು ಶಾಲೆ ತನ್ನ ಅಸ್ತಿತ್ವದ ಒಂದು ದಶಕವನ್ನು 2019ರಲ್ಲಿ ಪೂರೈಸಿದ್ದು ಶಾಲೆ ಆರಂಭಗೊಂಡಾಗ ಒಂದನೇ ತರಗತಿಗೆ ದಾಖಲಾಗಿ ಹತ್ತು ವರ್ಷಗಳ ನಿರಂತರ ವಿದ್ಯಾಭ್ಯಾಸವನ್ನು ಪೂರೈಸಿದ 9 ವಿದ್ಯಾರ್ಥಿಗಳು 2019ರ ಮಾರ್ಚ್/ಏಪ್ರಿಲ್‌ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದು ಶಾಲೆಯು ಶೇ.100ರಷ್ಟು ಫಲಿತಾಂಶವನ್ನು ಗಳಿಸಲು ಕಾರಣರಾಗಿದ್ದಾರೆ. ಇವರಲ್ಲಿ ಮುಂದಿನ ಪದವಿಪೂರ್ವ ಶಿಕ್ಷಣದ ಹಂತದಲ್ಲಿ ಆರು ವಿದ್ಯಾರ್ಥಿಗಳು ವಿಜ್ಞಾನ, ಇಬ್ಬರು ಕಲೆ ಮತ್ತು ಒಬ್ಬ ವಾಣಿಜ್ಯ ವಿಷಯವನ್ನು ಆಯ್ದುಕೊಂಡಿದ್ದಾರೆ. ಈವರೆಗೆ ಸಾಂಪ್ರದಾಯಿಕವಾಗಿ ಯಾವುದೇ ಸ್ಪರ್ಧೆಯನ್ನು ಎದುರಿಸದ ವಿದ್ಯಾರ್ಥಿಗಳ ಗುಂಪೊಂದು ಸಮರ್ಥವಾಗಿ ತಮ್ಮನ್ನು ಸ್ಪರ್ಧಾತ್ಮಕ ಜಗತ್ತಿಗೆ ನಿರುಮ್ಮಳವಾಗಿ ತೆರೆದುಕೊಂಡಿದ್ದನ್ನು ಇಲ್ಲಿ ಗಮನಿಸಬಹುದಾಗಿದೆ.

ಈ ಮಕ್ಕಳು ವಿವಿಧ ಸಾಮಾಜಿಕ–ಆರ್ಥಿಕ ಕೌಟುಂಬಿಕ ಹಿನ್ನೆಲೆಗಳಿಂದ ಬಂದವರಾಗಿದ್ದು ಶಾಲೆಯ ವಾತಾವರಣ, ಶಿಕ್ಷಕರು ಮತ್ತು ಪೋಷಕರ ಒತ್ತಾಸೆಯಿಂದ ವೈಯಕ್ತಿಕವಾಗಿ ಪಠ್ಯೇತರ ಆಸಕ್ತಿಗಳನ್ನು ಬೆಳೆಸಿಕೊಂಡಿರುವುದರ ಜೊತೆಗೆ (ವನ್ಯಜೀವಿ ಪ್ರಪಂಚ, ನಾಟಕ, ಛಾಯಾಗ್ರಹಣ, ಸಂಗೀತ–ನೃತ್ಯ, ಬರವಣಿಗೆ ಮುಂತಾದವುಗಳು)

ಶೈಕ್ಷಣಿಕವಾಗಿಯೂ ಸಮರ್ಪಕವಾದ ಸಾಧನೆ ಮಾಡಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಹಾದಿಯಲ್ಲಿ ಮುನ್ನಡೆಯುತ್ತಿರುವುದು, ಶಾಲೆಯು ನಂಬಿ ಅಳವಡಿಸಿಕೊಂಡ ವಿಭಿನ್ನ ಶೈಕ್ಷಣಿಕ ಮಾರ್ಗಕ್ಕೆ ಸಂದಿರುವ ಒಂದು ಹಂತದ ಯಶಸ್ಸಾಗಿದೆ. ಇದರಿಂದ ನಮ್ಮ ಪ್ರಯತ್ನಗಳನ್ನು ಇನ್ನೂ ಮುನ್ನಡೆಸಿಕೊಂಡು ಹೋಗಲು ಉತ್ಸಾಹ ಮೂಡಿದೆ.

ಇಷ್ಟಾದರೂ ಕೆಲವೊಮ್ಮೆ ಅತಿಯಾದ ಸ್ವಾತಂತ್ರ್ಯದಿಂದಾಗಿ ವ್ಯತಿರಿಕ್ತ ಪರಿಣಾಮಗಳೂ ಕಂಡುಬಂದಿವೆ. ಈ ಎಲ್ಲಾ ಅನುಭವಗಳನ್ನೂ ಪ್ರಾಮಾಣಿಕವಾಗಿ ಶಿಕ್ಷಕರು ಮತ್ತು ಶಿಕ್ಷಣಾಸಕ್ತರ ಜೊತೆ ಹಂಚಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಇದರಿಂದ ಸೃಜನಾತ್ಮಕ ಕನ್ನಡ ಶಾಲೆಗಳನ್ನು ಪ್ರಾರಂಭಿಸಿ ಅವನ್ನು ಯಶಸ್ವಿಯಾಗಿ ನಡೆಸಬಯಸುವ ವ್ಯಕ್ತಿ/ಸಂಸ್ಥೆಗಳಿಗೆ ಉಪಯೋಗವಾಗುತ್ತದೆಂಬ ಆಶಯವಿದೆ.

**ಎಂ. ಸಿ. ಮನೋಹರ** : ವೃತ್ತಿಯಲ್ಲಿ ಹೋಮಿಯೋಪತಿ ವೈದ್ಯ. ಶಿಕ್ಷಣ ಕ್ಷೇತ್ರದಲ್ಲಿ ಸಮಾನಾಸಕ್ತರ ಜೊತೆ ಸೇರಿ 12 ವರ್ಷಗಳ ಹಿಂದೆ, ಮೈಸೂರಿನಲ್ಲಿ ಪ್ರಾರಂಭಿಸಿದ 'ಅರಿವು' ವಿದ್ಯಾಸಂಸ್ಥೆಯ ಸ್ಥಾಪಕ ವ್ಯವಸ್ಥಾಪಕ ಟ್ರಸ್ಟೀ ಆಗಿದ್ದಾರೆ. ಚಟುವಟಿಕೆ, ಪರಿಸರ ಮತ್ತು ನಲಿವಿನ ಮೂಲಕ ಕಲಿಕೆಯೆನ್ನುವುದು ಈ ಶಾಲೆಯ ವಿಶೇಷತೆ.

*ಸಂಪರ್ಕ :* manohara.mysore@gmail.com